ಕೊಂಡಿದ್ದರು. ತಾವು ಭೇಟಿ ನೀಡಿದ ಪ್ರೀತಿಯ ನೆನಪಿಗಾಗಿ ಈ ಯೋಗ ಶಾಲೆಗೆ ಕುದುರೆ ಕೊಡಲು ತೀರ್ಮಾನಿಸಿದ್ದರು. ಈ ಸಂಗತಿಯನ್ನು ತಿಳಿದ ಶಾಲೆಯವರು ತುಂಬಾ ಅದ್ದೂರಿಯಿಂದಲೇ ಕುದುರೆಯನ್ನು ಬರಮಾಡಿಕೊಂಡರು. ಬೆಳಗು ಹರಿಯುವ ಹೊತ್ತಿಗೆ ಗುಣಸಿರಿ ಯೋಗಶಾಲೆಯ ಈ ಕುದುರೆಯನ್ನು ನೋಡಲು ಜನ ತಂಡೋಪತಂಡವಾಗಿ ಬರತೊಡಗಿದರು. ಕುದುರೆಯ ವಿಶೇಷ ಆಹಾರಗಳು ಜಿಲ್ಲಾ ಕೇಂದ್ರದಿಂದ ರವಾನೆಯಾದವು. ನೋಡ ನೋಡುತ್ತಿದ್ದಂತೆ ಕುದುರೆ ಸುತ್ತೆಲ್ಲ ಊರಿನ ಆಕರ್ಷಣೀಯ ವಸ್ತುವಾಯಿತು.

ಹೀಗೆ ಜನ ಬರುವುದು ಶಾಲೆಯವರಿಗೆ ಕಿರಿಕಿರಿಯಾಯಿತು. ಜೊತೆಗೆ ಅಶ್ವಮೇಧಯಾಗದ ಈ ಕುದುರೆಗೆ ಇಲ್ಲಿನ ಬಿರು ಬಿಸಿಲು ಹಾಗೂ ರುಚಿಸದ ಆಹಾರದಿಂದ ಯಾರೊಂದಿಗೂ ಸರಳವಾಗಿ ಬೆರೆಯಲಿಲ್ಲ. ಮಾನ್ಯ ಮಂತ್ರಿಗಳು ಕುದುರೆಯೊಂದಿಗೆ ಇದರ ಉಸ್ತುವಾರಿ ನೋಡಿಕೊಳ್ಳಲು ಇರಲೆಂದು ತಮ್ಮೂರಿನ ಒಬ್ಬ ಆಳುಮನುಷ್ಯ ಸಂಗಪ್ಪನನ್ನು ಕೊಟ್ಟು ಕಳಿಸಿದ್ದರು. ಕುದುರೆಯ ರ ಠ ಈ ಕ ಬಲ್ಲ ಈ ಸಂಗಪ್ಪ ಅದರ ಮೈಮೇಲೆ ಕೈ ಸವರಿ ಆತ್ಮೀಯತೆ ಬೆಳೆಸಿಕೊಂಡಿದ್ದ, ಹೀಗಾಗಿ ಅವನಿಗಷ್ಟೇ ಅದು ಸಹಕರಿಸತೊಡಗಿತು. ಸವಾರಿಗೆ ಬಳಸಿಕೊಳ್ಳಬೇಕೆಂದರೆ ಹತ್ತಿದವರನ್ನು ಕೆಡವಿ, ಹಿಂಗಾಲಿನಿಂದ ಒದ್ದು ಎಂತಿಂಥವರನ್ನೂ ಹಿಗ್ಗಾಮುಗ್ಗಾ ಝಾಡಿಸಿ ಬಿಡುತಿತ್ತು.

ಹೀಗೆ ಹತ್ತಾರು ದಿನಗಳು ಕಳೆದ ಮೇಲೆ ಹವಾಮಾನದ ವೈಪರೀತ್ಯದಿಂದಾಗಿಯೋ, ಆಹಾರದ ಬದಲಾವಣೆಯಿಂದಾಗಿಯೋ ಕುದುರೆ ತನ್ನ ಮುಂಚಿನ ಗತ್ತುಗಾರಿಕೆಯನ್ನು ಕಳೆದುಕೊಳ್ಳತೊಡಗಿತು. ಬಾಲಕರಿಗೆ ಕುದುರೆ ಸವಾರಿ ಮಾಡಿಸಬೇಕೆಂದರೆ ಅದರ ವಿದ್ಯೆ ಬಲ್ಲ ತರಬೇತುದಾರರ ಅಗತ್ಯವಿತ್ತು. ಯಾರೂ ಎಲ್ಲೂ ಸಿಗದಿದ್ದಾಗ ಅನಿವಾರ್ಯವಾಗಿ ಅದನ್ನು ನೆನೆ ಹಾಕಿದ ಕಾಳುಗಳಿಂದ ಮೇಯಿಸುವುದೇ ಆಯಿತು. ಕುದುರೆಗೆ ಯಾವಾಗ ಕೆಲಸವಿಲ್ಲದಾಯಿತೋ, ಕುದುರೆ ನೋಡಿಕೊಳ್ಳುತ್ತಿದ್ದ ಸಂಗಪ್ಪನಿಗೂ ಅದರ ಆಹಾರ, ಸ್ನಾನ, ಸ್ವಚ್ಛತೆ ಬಿಟ್ಟರೆ ಬೇರೆ ಕೆಲಸವಿಲ್ಲದಾಯಿತು. ಅಷ್ಟಿಷ್ಟು ಸೆರೆ ಕುಡಿಯುವ ಚಟ ಹೊಂದಿದ್ದ ಸಂಗಪ್ಪ ಗುಣಸಿರಿಗೆ ಹೋಗಿ ಪಾಕೀಟು ಹಾಕಿ ಬರುತ್ತಿದ್ದ. ಅಲ್ಲಿ ಹೊಟ್ಟೆ ತುಂಬಾ ಹಾಕಿ ಕಂಠಪೂರ್ತಿಯಾದ ಮೇಲೆ ಕೂಡಿದ ಜನರೆದುರು ಕುದುರೆಯ ವರ್ಣನೆ ಮಾಡುತ್ತಿದ್ದ. 'ದೇವಲೋಕದಿಂದ ಬಂದ ಕುದುರೆಯನ್ನು ಸ್ವತಃ ದೇವರು ಮಾತ್ರ ನಡೆಸಬಲ್ಲ. ಆ ದೇವರು ನಾನು' ಎಂದು ಹೇಳಿಕೊಳ್ಳುತ್ತಿದ್ದ. ಇದರಿಂದಾಗಿ ಸಹಪಾಠಿ ಪಾಕೀಟು ಪ್ರಿಯರು ಸಂಗಪ್ಪನಿಗೆ ವಿಶೇಷವಾದ ಗೌರವ ಕೊಡುತ್ತಿದ್ದರು. ಪಾಕೀಟು ದಾಸನಾದ ಸಂಗಪ್ಪನಿಗೆ ಬರುಬರುತ್ತಾ ಹಣದ ಅಗತ್ಯ ಹೆಚ್ಚಾಯಿತು. ಅವನ ಸಂಬಳದಲ್ಲಿ ಇದೆಲ್ಲಾ ಸಾಲದಾಯಿತು. ಕುದುರೆಯನ್ನು ಒಂದೇ ಕಟ್ಟಿದರೆ ಕುದುರೆ ಹೋಗಿ ಕತ್ತೆಯಾದೀತೆಂದು ಆಟದ ಮಾಸ್ತರರ ಸಲಹೆಯಂತೆ ಅದನ್ನು ಸವಾರಿ ಮಾಡಿಕೊಂಡು ಬರಲು ಸಂಗಪ್ಪ ಶಾಲೆಯಿಂದ ಐದಾರು ಕಿಲೋ ಮೀಟರು ತೆಗೆದುಕೊಂಡು ಹೋಗಿ ಬರುತ್ತಿದ್ದ.

ಮುಂಚಿನ ಗತ್ತುಗಾರಿಕೆಯನ್ನು ಕಳೆದುಕೊಂಡಿದ್ದ ಕುದುರೆಯನ್ನು ಈಗ ಯಾರು ಬೇಕಾದರೂ ಹತ್ತಿ ಸವಾರಿ ಮಾಡಬಹುದಾಗಿತ್ತು. ಗುಣಸಿರಿಗೆ ಹೋಗುತ್ತಿದ್ದ ಸಂಗಪ್ಪನಿಗೆ ಊರ ಹುಡುಗರು ಐದು, ಹತ್ತು ನೀಡಿ ಸಂಗಪ್ಪನೊಂದಿಗೆ ಕುದುರೆ ಸವಾರಿ ಮಾಡಿಕೊಂಡು ಬರುತ್ತಿದ್ದರು. ಆ ರೂಪಾಯಿಗಳಲ್ಲಿ ಸಂಗಪ್ಪನಿಗೆ ಪಾಕೀಟಿನ ಚಿಂತೆ ದೂರವಾಯಿತು. ಒಂದೆಡೆ ಕುದುರೆಯ ಉಸ್ತುವಾರಿ ಖರ್ಚು ಹೆಚ್ಚುತ್ತಾ ಹೋಗಿದ್ದು, ಮತ್ತೊಂದೆಡೆ ಸಂಗಪ್ಪ ತನ್ನ ಪಾಕೀಟು ಚಟಕ್ಕಾಗಿ ಕುದುರೆಯನ್ನು ಬಳಸಿಕೊಳ್ಳುತ್ತಿರುವುದು ತಿಳಿದು ಜಿಲ್ಲಾ ಕೇಂದ್ರದಲ್ಲಿದ್ದ ಕೇಂದ್ರದ ಆಡಳಿತ ಮಂಡಳಿಯ ಪಿತ್ತ ನೆತ್ತಿಗೇರುವಂತಾಯಿತು. ಒಂದು ರವಿವಾರ ಕೇಂದ್ರ ಅರಮನೆ ಸಭಾಂಗಣದಲ್ಲಿ ಅವರೆಲ್ಲ ಮೀಟಿಂಗು ಸೇರಿ ಮೊದಲು ಸಂಗಪ್ಪನಿಗೆ ಗೇಟ್ ಪಾಸ್ ಕೊಟ್ಟು ಕಳಿಸಿದರು. ಕುದುರೆಗಳನ್ನು ಸಾಕಿಕೊಳ್ಳುವ ಹವ್ಯಾಸವಿದ್ದ ಮೂಡಗಲ್ಲು ಸಂಸ್ಥಾನದ ಮಹಾರಾಜರಿಗೆ ನಮ್ಮದೊಂದು ಕುದುರೆಯನ್ನು ತಮ್ಮ ಕುದುರೆಗಳೊಂದಿಗೆ ಸಾಕಿಕೊಳ್ಳಬೇಕೆಂದು ವಿನಂತಿ ಮಾಡಿದಾಗ ಮಹಾರಾಜರು ಒಲ್ಲೆ ಎನ್ನಲಿಲ್ಲ. 'ಕಳಿಸಿ ಕೊಡಿ, ತುಂಬಾ ಒಳ್ಳೆಯದಾಯಿತು' ಎಂದರು.

ಕೇಂದ್ರದ ಅಡುಗೆ ಸಿಬ್ಬಂದಿಯವರು ಹತ್ತು ಕಿಲೋಮೀಟರು ದೂರವಿರುವ ಮೂಡಗಲ್ಲು ಅರಮನೆಗೆ ಕುದುರೆಯನ್ನು ಬಿಟ್ಟು ಬರಲು ಸಿದ್ಧರಾದರು. ಯಾಗದ ಕುದುರೆ ಸಿದ್ಧವಾಗಿ ಗುಣಸಿರಿಯಿಂದ ಮೂಡಗಲ್ಲಿಗೆ ಪ್ರಯಾಣಕ್ಕೆ ಹೊರಟು ನಿಂತಾಗ ಶಾಲೆಯ ಬಾಲಕರು ವಿಶೇಷ ಆದರಾಭಿಮಾನಗಳಿಂದ ಬೀಳ್ಕೊಟ್ಟರು. ಇಲ್ಲಿ ಇರುವಷ್ಟು ಕಾಲ ಉಣ್ಣಲು, ತಿನ್ನಲು ಎಳ್ಳಷ್ಟೂ ಕಡಿಮೆ ಮಾಡಿರದ ಕಾರಣವಾಗಿ ಕುದುರೆ ತುಂಬಾ ಚೆನ್ನಾಗಿಯೇ ಬೆಳೆದಿತ್ತಾದರೂ, ಅದರ ತಕ್ಕುದಾದ ಕೆಲಸವಿಲ್ಲದ ಕಾರಣ ಕುದುರೆ ಒಂದರ್ಥದಲ್ಲಿ ಕತ್ತೆಯಾಗಿ ಪರಿವರ್ತನೆಯಾಗಿತ್ತು. ವೇಳೆಗೆ ಸರಿಯಾಗಿ ತಿನ್ನುವುದನ್ನು ಬಿಟ್ಟರೆ, ಅದಕ್ಕೆ ಕೆಲಸ ಮತ್ತು ತಿರುಗಾಡುವುದೆಂದರೆ ಅಲರ್ಜಿಯಾಗಿತ್ತು. ಶಾಲೆಯನ್ನು ಬಿಟ್ಟು ಮೂಡಗಲ್ಲು ಸಂಸ್ಥಾನಕ್ಕೆ ಹೊರಟ ಕುದುರೆ ತುಂಬಾ ನೋವಿನಿಂದಲೇ ತನ್ನ ಪಯಣ ಬೆಳೆಸಿತು.

***

ಸಂಸ್ಥಾನಕ್ಕೆ ಕುದುರೆಯನ್ನು ಬರಮಾಡಿಕೊಂಡ ಮಹಾರಾಜರು ಅಪರೂಪವಾದ ಈ ಕುದುರೆ ತಮ್ಮ ವಾಡೆಯನ್ನು ಸೇರಿದ್ದು ತುಂಬಾ ಸಂತೋಷದಿಂದಲೇ ಸ್ವಾಗತಿಸಿದರು. ವಾಡೆಯ ಇತರ ಕುದುರೆಗಳೊಂದಿಗೆ ಬೆರೆಯಬೇಕಾದ ಯಾಗದ ಈ ಕುದುರೆ ಅಲ್ಲೂ ತನ್ನ ಮೊಂಡಾಟ ಹಿಡಿಯಿತು. ಶಾಲೆಯಲ್ಲಿದ್ದಾಗ ವೇಳೆಗೆ ಸರಿಯಾಗಿ ಉಣ್ಣಲು ತಿನ್ನಲು ಸಾಕಷ್ಟು ಬರುತ್ತಿದ್ದ ಕುದುರೆಗೆ ಇಲ್ಲಿಯ ನಿಯಮಿತತನ, ಸವಾರಿಯ ಅಭ್ಯಾಸಕ್ಕೆ ಹೊಂದಿಕೊಳ್ಳದೇ ಹೋಯಿತು. ಬಂದ ಇಡೀ ದಿನವಂತೂ ತನ್ನ ಮೊಂಡಾಟ ಹಿಡಿಯಿತು. ಹಗ್ಗ ಜಗ್ಗಿ ತಪ್ಪಿಸಿಕೊಳ್ಳಲು ನೋಡಿತು. ಮಹಾರಾಜರು ಎಷ್ಟೇ ಕಾಳಜಿ ಮಾಡಿದರೂ ಅದರ ಲಕ್ಷ್ಯವೆಲ್ಲಾ ಶಾಲೆಯ ಕಡೆಗೆ ಇದ್ದಿತು. ವಾಡೆಯ ಆಳುಗಳಿಗೆ ಈ ಕುದುರೆಯ ಮೊಂಡಾಟ ಸಹಿಸದಾಯಿತು. ಗುಣಸಿರಿಯಲ್ಲಿ ಇರುವಷ್ಟು ಕಾಲ ಏಟಿನ ರುಚಿ ನೋಡಿರದಿದ್ದ ಕುದುರೆಗೆ ಇಲ್ಲಿ ತಹಬದಿಗೆ ತರಲು ಪ್ರಯೋಗಿಸಿದ್ದ ಚಾಟಿ ಏಟುಗಳು ಕುದುರೆಯನ್ನು ತಲ್ಲಣಗೊಳಿಸಿದವು. ಈ ಎಲ್ಲ ತಲ್ಲಣಗಳ ಮುಕ್ತತೆಗಾಗಿ ರಾತ್ರಿ ಯಾವಾಗಲೋ ಹಗ್ಗ ಹರಿದುಕೊಂಡು ಯಾಗದ ಕುದುರೆ ವಾಡೆ ಬಿಟ್ಟು ತಪ್ಪಿಸಿಕೊಂಡು ಹೋಗಿತ್ತು.

***

ಸಂಸ್ಥಾನದ ಮಹಾರಾಜರು ಗುಣಸಿರಿ ಯೋಗ ಶಾಲೆಗೆ ಫೋನಾಯಿಸಿ, 'ನಿಮ್ಮ ಕುದುರೆ ತಪ್ಪಿಸಿಕೊಂಡು ಹೋಗಿದೆ, ಶಾಲೆಗೇನಾದರೂ ಬಂದಿದ್ದರೆ ತಿಳಿಸಿ' ಎಂದರು. ಬೆಳಗು ಮುಂಜಾನೆ ಬಂದ ಈ ಬರ ಸಿಡಿಲಿನ ವಾರ್ತೆ ವಸತಿ ಶಾಲೆಯ ಸಿಬ್ಬಂದಿಯ ತಲೆ ಕೆಡಿಸಿತು. ನೂರು ಎಕರೆ ವಿಶಾಲ ವಿಸ್ತೀರ್ಣದ ವಸತಿ ಶಾಲೆಯ ಪ್ರತಿ ಇಂಚಿಂಚೂ ಹುಡುಕಿಕೊಂಡು ಬಂದ ಶಾಲೆಯ ಸಹಾಯಕ ಸಿಬ್ಬಂದಿ 'ಇಲ್ಲಿ ನಮ್ಮಲ್ಲಿ ಬಂದಿಲ್ಲ' ಎಂದರು. ಹಾಗಾದರೆ ಎಲ್ಲಿ ಹೋಗಿರಬಹುದೆಂಬ ಚಿಂತೆ ಶಾಲೆಯವರನ್ನೂ ಕಾಡಿತು. ಜಿಲ್ಲಾ ಕೇಂದ್ರಕ್ಕೆ ಫೋನಾಯಿಸಿ ಆಡಳಿತಗಾರರಿಗೆ ಈ ಆಘಾತಕಾರಿ ಸುದ್ದಿ ಮುಟ್ಟಿಸಲಾಯಿತು. ತೀವ್ರ ಕಾಳಜಿ ಹೊಂದಿದ್ದ ಅವರು 'ಕುದುರೆ ಎಲ್ಲಿಯೇ ಇರಲಿ, ಮಹಾರಾಜರೊಂದಿಗೆ ಹುಡುಕುವುದು ನಮ್ಮ ಕರ್ತವ್ಯವಾಗಿದೆ' ಎಂದರು. ಶಾಲೆಯ ಪಾಠ ಹೇಳುವ ಸಿಬ್ಬಂದಿ ಶಾಲೆಯಲ್ಲಿಯೇ ಉಳಿದು ಆಟದ ತರಬೇತುದಾರರೆಲ್ಲರೂ ಉಳಿದ ಸಿಬ್ಬಂದಿಯೊಂದಿಗೆ ತಂಡವಾಗಿ ಎಲ್ಲ ದಿಕ್ಕುಗಳಲ್ಲೂ ಕುದುರೆಯನ್ನು ಹುಡುಕುವುದು ಎಂದು ತೀರ್ಮಾನವಾಗಿ ಮೆಸ್ಸಿನಲ್ಲಿ ಸಿದ್ಧವಾದ ಬೆಳಗಿನ ಅವಲಕ್ಕಿ, ಹಾಲು, ತತ್ತಿ, ಬಾಳೆಹಣ್ಣು ಹೊಟ್ಟೆಗೆ ಹಾಕಿಕೊಂಡು ಶಾಲಾ ಕ್ರೀಡಾ ಸಿಬ್ಬಂದಿ ಹೊರಡಲನುವಾಯಿತು. ಮಹಾರಾಜರಿಗೆ ಕರೆ ಮಾಡಿ ನಮ್ಮ ಶಾಲಾ ಸಿಬ್ಬಂದಿಯೂ ಯಾಗದ ಕುದುರೆ ಹುಡುಕಲು ಅಣಿಯಾಗಿದ್ದು, ನಮ್ಮ ಜಿಲ್ಲಾ ಆಡಳಿತಗಾರರು ತೀವ್ರವಾಗಿ ಸ್ಪಂದನ ನೀಡಿದ್ದು ನೀವೇನು ಕಾಳಜಿ ಮಾಡದಿರಿ ಅಂದಾಗ, ಮಹಾರಾಜರು ತಾವೂ ಕುದುರೆ ಹುಡುಕಲು ಹೊರಟಿದ್ದಾಗಿ ತಿಳಿಸಿದರು. ಪೂರ್ವ ದಿಕ್ಕಿನಿಂದ ಮಹಾರಾಜರು, ಪಶ್ಚಿಮ ದಿಕ್ಕಿನಿಂದ ಶಾಲಾ ಸೈನ್ಯ ಕುದುರೆ ಅರಸಿ ಕಾಡಿಗೆ ಬಿದ್ದರು.

***

ಯಾಗದ ಕುದುರೆ ಹುಡುಕಲು ಸ್ವತಃ ಹೊರಟ ರಾಜದಂಪತಿಗಳನ್ನು ಊರ ಜನ ಕೋಟೆ ದ್ವಾರದವರೆಗೂ ಬಂದು ಬೀಳ್ಕೊಟ್ಟು ಶುಭ ಹಾರೈಸಿದರು. ಸ್ವತಃ ಜೀಪು ಚಾಲನೆ ಮಾಡುತ್ತಿದ್ದ ಮಹಾರಾಜರು ಹಿಂದೆ ವಯಸ್ಸಿನಲ್ಲಿ ಮುಂಬೈ, ಕೊಲ್ಲಾಪುರ, ಹೈದರಾಬಾದಗಳಲ್ಲಿ ನಡೆದ ಜೀಪು ರೇಸಿನಲ್ಲಿ ಪಾಲ್ಗೊಂಡು